

# ಪ್ರಕೃತಿ ಮಡಿಲಲ್ಲಿ ಕರುಂಬಿತ್ತಿಲ್ ನಾದಲೀಲೆ

**ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಲೆ ಗ್ರಾಮದಲ್ಲಿರುವ 'ಕರುಂಬಿತ್ತಿಲ್' ಮನೆಯಲ್ಲಿ ಕಳೆದ 25 ವರ್ಷಗಳಿಂದ ಸಂಗೀತ ಶಿಬಿರ ನಡೆಯುತ್ತಿದೆ. ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದ ವಿಠಲ ರಾಮಮೂರ್ತಿ ಅವರ ಸಾರಥ್ಯದಲ್ಲಿ ನಡೆಯುವ ಸಂಗೀತ ಸಂಭ್ರಮವನ್ನು ಈ ಬಾರಿ ಮೇ 20ರಿಂದ 25ರವರೆಗೆ ಏರ್ಪಡಿಸಲಾಗಿದೆ.**

■ **ಉಮಾ ಅನಂತ್**

ಇದೊಂದು ಪುಟ್ಟ ಹಳ್ಳಿ. ಧರ್ಮಸ್ಥಳದಿಂದ ಏಳೆಂಟು ಕಿ.ಮೀ. ದೂರದಲ್ಲಿರುವ ಈ ಊರಿನ ಹೆಸರು ನಿಡ್ಲೆ. ಪ್ರಾಕೃತಿಕ ಸೊಬಗನ್ನು ತನ್ನೊಡಲಲ್ಲಿ ತುಂಬಿಕೊಂಡಿರುವ ಸುಂದರ ಪರಿಸರ. ಇಲ್ಲಿ ಸಂಗೀತವನ್ನೇ ಉಸಿರಾಗಿಸಿಕೊಂಡಿರುವ 'ಕರುಂಬಿತ್ತಿಲ್' ಎಂಬ ಮನೆಯಲ್ಲಿ ಪ್ರತೀ ವರ್ಷ ಮೇ ತಿಂಗಳಲ್ಲಿ ಒಂದು ವಾರ ಕಾಲ ಕರ್ನಾಟಕ ಸಂಗೀತ ಧಾರೆಯಾಗಿ ಹರಿಯುತ್ತದೆ. ಮುಂಗಾರು ಮಳೆಯ ಆರಂಭಕ್ಕೆ ಮುನ್ನುಡಿಯಾಗಿ ಇಲ್ಲಿ ಸಂಗೀತ ರಸಧಾರೆ ಅಲೆ ಅಲೆಯಾಗಿ ತೇಲಿ ಬಂದು ನಾಡಿನ ಸಂಗೀತಾಸಕ್ತರನ್ನು ಕೈಬೀಸಿ ಕರೆಯುತ್ತದೆ. ಇದೇ 'ಕರುಂಬಿತ್ತಿಲ್' ಸಂಗೀತ ಶಿಬಿರ.

ಕಳೆದ 25 ವರ್ಷಗಳ ಹಿಂದೆ ಪಿಟೀಲು ವಾದಕ ವಿದ್ವಾನ್ ವಿಠ್ಠಲ ರಾಮಮೂರ್ತಿ ಅವರ ಸಮರ್ಥ ಮುಂದಾಳತ್ವದಲ್ಲಿ, ಅವರ ಮನೆಯಲ್ಲೇ ಈ ಶಿಬಿರ ಉಚಿತ ಊಟ–ವಸತಿಯೊಂದಿಗೆ ಆರಂಭಗೊಂಡು, ಇಲ್ಲಿಯವರೆಗೆ ನಿರಂತರವಾಗಿ ನಡೆಯುತ್ತಾ ಬಂದಿದೆ. ದೇಶದ ಖ್ಯಾತ ವಿದ್ವಾಂಸರಾದ ಬಾಲಮುರಳಿಕೃಷ್ಣ, ಟಿ.ಎಂ. ಕೃಷ್ಣ, ಕುಮರೇಶ್, ಜಯಂತಿ ಕುಮರೇಶ್, ಲಾಲ್‌ಗುಡಿ ಜಯರಾಮನ್, ಮೈಸೂರು ನಾಗರಾಜ್–ಮಂಜುನಾಥ್, ಬಾಂಬೆ ಜಯಶ್ರೀ, ಅಭಿಷೇಕ್ ರಘುರಾಮ್, ಉಮಯಾಳಪುರಂ ಶಿವರಾಮನ್, ವಿ.ವಿ. ಸುಬ್ರಹ್ಮಣ್ಯನ್ ಸೇರಿದಂತೆ ಅನೇಕ ಕಲಾವಿದರು ನಿಡ್ಲೆಯ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಮಕ್ಕಳಿಗೆ ಅನುಭವೀ ಸಂಗೀತ ದಿಗ್ಗಜರಿಂದ ಒಂದು ವಾರ ಸಂಗೀತದ ಪಾಠವೂ ನಡೆಯುತ್ತದೆ.

ಪುಟ್ಟ ಹಳ್ಳಿಯಲ್ಲಿ ನಡೆಯುವ ಸಂಗೀತ ಶಿಬಿರ ಇದೀಗ ಜಾಗತಿಕ ಮನ್ನಣೆ ಪಡೆದಿದೆ. ಅಂತರರಾಷ್ಟ್ರೀಯ ಮಟ್ಟದ ಕಲಾವಿದರೂ ಇಲ್ಲಿ ಭಾಗವಹಿಸಿದ್ದಲ್ಲದೆ, ವಿದೇಶಗಳಿಂದಲೂ ಮಕ್ಕಳು ಸೇರಿದಂತೆ ಸಂಗೀತಾಸಕ್ತರು ಇಲ್ಲಿ ರಸಗವಳ ಸವಿಯುತ್ತಿದ್ದಾರೆ. ನಾದದಲೆಯನ್ನು ಆಸ್ವಾದಿಸುತ್ತಿದ್ದಾರೆ. ಒಂದು ವಾರದ ಅವಧಿ ಹಳ್ಳಿಯಲ್ಲಿ ಸಂಗೀತದ್ದೇ ಹಬ್ಬ, ಮಕ್ಕಳಿಗೆ ಬೇಸಿಗೆ ರಜೆಯ ಸಂಭ್ರಮ ನಾದೋಪಾಸನೆಯೊಂದಿಗೆ.

'ನಾನು ಕಲಿತ ನಾದವಿದ್ಯೆಯನ್ನು ಮಕ್ಕಳಿಗೂ ಕಲಿಸಬೇಕೆಂಬುದು ಅಮ್ಮನ ಆಸೆಯಾಗಿತ್ತು. ಅವರ ಕನಸನ್ನು ಸಾಕಾರಗೊಳಿಸುವ ಸಲುವಾಗಿ 2000 ಇಸವಿಯಲ್ಲಿ ನಮ್ಮ ಹಳ್ಳಿ ಮನೆಯಲ್ಲೇ ಸಂಗೀತ ಶಿಬಿರ ಆರಂಭಿಸಿದಾಗ ಭಾಗವಹಿಸಿದ ಮಕ್ಕಳ ಸಂಖ್ಯೆ ಕೇವಲ 15. ಈಗ ಸುಮಾರು 300 ಮಕ್ಕಳು ಇಡೀ ವಾರ ಇದ್ದು ಸಂಗೀತ ಉಪನ್ಯಾಸ, ಪ್ರಾತ್ಯಕ್ಷಿಕೆ, ಕಛೇರಿಗಳಲ್ಲಿ ಭಾಗವಹಿಸುತ್ತಾರೆ. ನಾಡಿನಾದ್ಯಂತ ಮಕ್ಕಳು ಇಲ್ಲಿ ಪಾಲ್ಗೊಳ್ಳುವಷ್ಟರ ಮಟ್ಟಿಗೆ ಈ ಶಿಬಿರ ಮನ್ನಣೆ ಪಡೆದಿದೆ. ನುರಿತ ಕಲಾವಿದರ ಸಂಗೀತ ತರಬೇತಿ ಜೊತೆಗೆ ಕಛೇರಿಗಳೂ ನಡೆದು ಸಂಗೀತ ಮನೆಮಾತಾಗುವಂತಾಗಿದೆ' ಎಂದು ಹೇಳುತ್ತಾರೆ ವಿದ್ವಾನ್ ವಿಠಲ ರಾಮಮೂರ್ತಿ.

ಧರ್ಮಸ್ಥಳದ ಸುತ್ತಮುತ್ತಲಿನ ಮಕ್ಕಳು ಮಾತ್ರವಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳು, ಬೆಂಗಳೂರು, ಚೆನ್ನೈ ಹಾಗೂ ಅಮೆರಿಕದಿಂದಲೂ ಮಕ್ಕಳು ಬಂದು ಭಾಗವಹಿಸಿದ್ದಾರೆ. 4ರಿಂದ 75

